# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ-190,

# ಮಂಗಮ್ಮನಪಾಳ್ಯ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

ಮಾನ್ಯ ನೋಡಲ್ ಅಧಿಕಾರಿ/ಸ.ಕಾ.ನಿ.ಅ. (ಹೆಚ್.ಎಸ್.ಆರ್ ಉಪವಿಭಾಗ) ರವರು ದಿನಾಂಕ: 18.01.2021 ರಂದು ಬೆಳಿಗ್ಗೆ 11.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು 190-ಮಂಗಮ್ಮನಪಾಳ್ಯ, ವಾರ್ಡ್ ಕಛೇರಿ (ಹೆಚ್.ಎಸ್.ಆರ್ ಉಪವಿಭಾಗ) ರಲ್ಲಿ ನಡೆಸಿದ್ದ, ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಸಭೆಯಲ್ಲಿ ಹಾಜರಿದ್ದ ಸದಸ್ಯರು/ಅಧಿಕಾರಿಗಳು**

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಪದನಾಮ |
|---|---|---|
| 1 | ಶ್ರೀ ಟಿ. ಹನುಮಂತರಾಯ | ಅಧ್ಯಕರು/ ನೋಡಲ್ ಅಧಿಕಾರಿಗಳು |
| 2 | ಶ್ರೀ ರವಿ ಡಿ | ಸಂಚಾಲಕರು/ ಕಾರ್ಯದರ್ಶಿಗಳು |
| 3 | ಶ್ರೀ ಶೇಷಾದ್ರಿ | ಕಾರ್ಯಪಾಲಕ ಅಭಿಯಂತರರು, ಬೊ.ವಿ |
| 4 | ಶ್ರೀಮತಿ ಲಕ್ಷ್ಮೀ ಬಿ | ಸ.ಕಂ.ಅ ಹೆಚ್.ಎಸ್.ಆರ್ ಉಪವಿಭಾಗ |
| 5 | ಶ್ರೀ ಸಾಯಬಣ್ಣ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 6 | ಶ್ರೀ ಡಿ. ವಿಜಯಕುಮಾರ್ | ಕಿರಿಯ ಅಭಿಯಂತರರು, ಬೇಸ್ಕಾಂ |
| 7 | ಶ್ರೀ ರಮೇಶ್ ಡಿ | ಕಿ.ಅ. ವಿದ್ಯುತ್ ವಿಭಾಗ |
| 8 | ಶ್ರೀ ವಿನೋದ್ ಜಿ. | ಹಿರಿಯ ಆರೋಗ್ಯ ಪರಿವೀಕ್ಷಕರು. |
| 9 | ಶ್ರೀ ನರಸಪ್ಪ ಹೆಚ್. | ತೋಟಗಾರಿಕೆ ನಿರ್ವಹಣೆ ಪರಿವೀಕ್ಷಕರು |
| 10 | ಶ್ರೀ ಹೊನ್ನುರ ಬಾಷ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 11 | ಶ್ರೀ ನಾಗೇಂದ್ರ | ಸದಸ್ಯರು |
| 12 | ಶ್ರೀ ಶ್ರೀನಿವಾಸ ರೆಡ್ಡಿ | ಸದಸ್ಯರು |
| 13 | ಶ್ರೀ ಸುರೇಶ್ ರೆಡ್ಡಿ | ಸದಸ್ಯರು |
| 14 | ಶ್ರೀ ಉಮೇಶ್ ಎಸ್. | ಸದಸ್ಯರು |
| 15 | ಶ್ರೀ ಗೋಪಿನಾಥ | ಸದಸ್ಯರು |
| 16 | ಶ್ರೀ ಸ್ಯೆಯದ್ ಸಲಾಂ | ಸದಸ್ಯರು |
| 17 | ಶ್ರೀ ಚಂದ್ರ ರೆಡ್ಡಿ | ಸದಸ್ಯರು |

ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯಾದ ಶ್ರೀ ಟಿ ಹನುಮಂತರಾಯ ರವರು ಸಭೆಗೆ ಆಗಮಿಸಿದ ಎಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು, ಅಧ್ಯಕ್ಷರು ವಾರ್ಡ್ ಸಭೆಗೆ ಹಾಜರಾಗಿದ್ದ ಸದಸ್ಯರಿಗೆ ಮತ್ತು ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ಪ್ರಸ್ತಾಪಿಸಲು ಕೋರಿದರು.

Scanned with Car

| ಕ್ರ ಸಂ | ಇಲಾಖೆ | ವಿಷಯ |
|---|---|---|
| 1 | ಬಿ.ಬಿ.ಎಂ.ಪಿ (ವಿದ್ಯುತ್) | • ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆಗೆ ಪ್ರದೇಶವಾರು ಸರ್ವೆ ಮಾಡಿಸಿ ದುರಸ್ಥಿಗೆ ಬಂದಿರುವ ಬೀದಿ ದೀಪಗಳನ್ನು ಬದಲಾಯಿಸಿ ಹೊಸದಾಗಿ ಎಲ್.ಇ.ಡಿ ಬಲ್ಬ್‌ಗಳನ್ನು ಹಾಗೂ ಟೈಮರ್ ಅಳವಡಿಸಲು ಕ್ರಮಕೈಗೊಳ್ಳಲುವಂತೆ ಸದಸ್ಯರಾದ ಉಮೇಶ್ ರವರು ಕೋರಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯ ವಿದ್ಯುತ್ ಚಿತಗಾರ ರಸ್ತೆಯ ಬೀದಿ ದೀಪಗಳನ್ನು ದುರಸ್ಥಿ ಪಡಿಸಲು ಸದಸ್ಯರು ಕೋರಿರುತ್ತಾರೆ.<br>ಈ ಬಗ್ಗೆ ಕ್ರಮವಹಿಸುವಂತೆ ಅಧ್ಯಕ್ಷರು ಸಂಬಂಧಪಟ್ಟ ಅಭಿಯಂತರಿಗೆ ಸೂಚಿಸಿರುತ್ತಾರೆ.<br>**ಕ್ರಮ : ಸ.ಅ. ವಿದ್ಯುತ್** |
| 2 | ಘನತ್ಯಾಜ್ಯ (ಆರೋಗ್ಯ) ಇಲಾಖೆ | ಹಿಂದಿನ ಸಭೆಯಲ್ಲಿ ಚರ್ಚಿಸಿರುವಂತೆ ವಾರ್ಡ್ ವ್ಯಾಪ್ತಿಯಲ್ಲಿ ಸೊಳ್ಳೆ ಔಷದಿ ಸಿಂಪಡಿಸಲು ಸೂಚಿಸಿರುವ ವಿಷಯದ ಬಗ್ಗೆ ಪ್ರಸ್ಥಾಪಿಸಲಾಗಿದ್ದು, ಈ ಬಗ್ಗೆ ಕ್ರಮ ವಹಿಸಲಾಗಿದೆ ಹಾಗೂ ಪ್ರದೇಶವಾರು ಔಷದಿ ಸಿಂಪಡಿಸಲು ಸೂಚಿಸಲಾಗಿದೆ ಎಂದು ಹಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿರುತ್ತಾರೆ.<br>• ದಿನಾಂಕ: 23.11.2020 ರಂದು ನಡೆದ ಸಭೆಯಲ್ಲಿ ಚರ್ಚಿಸಿರುವಂತೆ ಸಂಡೆ ಬಜಾರನ ಮಳಿಗೆಗಳನ್ನು ತೆರವುಗೊಳಿಸಲು ಸೂಚಿಸಿದ್ದು, ಈ ಬಗ್ಗೆ ಪೋಲಿಸ್ ಸಿಬ್ಬಂದಿ ಮತ್ತು ವಾರ್ಡ್ ಸದಸ್ಯರೊಂದಿಗೆ ತೆರವುಗೊಳಿಸಲಾಗಿದೆ ಎಂದು ಸದಸ್ಯರಾದ ಸೈಯದ್ ಸಲಾಂ ರವರು ಸಭೆಯ ಗಮನಕ್ಕೆ ತಂದಿರುತ್ತಾರೆ.<br>ಹಿಂದಿನ ಎಲ್ಲಾ ಸಭೆಯಲ್ಲಿ ಚರ್ಚಿಸಿರುವಂತೆ ಒಟ್ಟು 42 ಮಾಂಸದ ಅಂಗಡಿಗಳು ವಾರ್ಡ್ ವ್ಯಾಪ್ತಿಯಲ್ಲಿದ್ದು, ಅದರ ಪೈಕಿ 16 ಅಂಗಡಿಗಳಿಗೆ ಪರವಾನಗಿ ನೀಡಿದ್ದು, ಉಳಿದ ಅಂಗಡಿಗಳಲ್ಲಿ ಹಿಂದಿನ ನಗರ ಸಭೆಯ ಪರವಾನಗಿಯನ್ನೇ ಪ್ರದರ್ಶಿಸಿರುತ್ತಾರೆ ಇವುಗಳನ್ನು ಈ ಕೂಡಲೇ ಮುಚ್ಚಿಸುವಂತೆ ವಾರ್ಡ್ ಸದಸ್ಯರಾದ ಸೈಯದ್ ಸಲಾಂ ರವರು ವಾರ್ಡ್ ಸಭೆಯ ಗಮನಕ್ಕೆ ತಂದಿರುತ್ತಾರೆ.<br>• ಈ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>**ಕ್ರಮ : ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು,** |
| 3 | ಬಿ.ಡಬ್ಲ್ಯೂ.ಎಸ್.ಎಸ್.ಬಿ | • ವಾರ್ಡ್ ವ್ಯಾಪ್ತಿಯ ಹೊಸಪಾಳ್ಯದ ವಿದ್ಯುತ್ ಚಿತಗಾರ ಪ್ರದೇಶದಲ್ಲಿ ಕುಡಿಯುವ ನೀರಿನ ಪೈಪ್ ಲೈನ್ ಮಾರ್ಗ ಕಲ್ಪಿಸಲು ಹಾಗೂ ಮುನೇಶ್ವರ ಬಡಾವಣೆಯಲ್ಲಿ ಒಳಚರಂಡಿ ಪೈಪ್ ಒಡೆದು ಸ್ಥಳೀಯರಿಗೆ ಮತ್ತು ಸಾರ್ವಜನಿರಿಗೆ ದುರ್ವಾಸನೆ ಬೀರುತ್ತಿದ್ದು, ಇದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀಳುವ ಸಾಧ್ಯತೆಗಳಿರುತ್ತದೆ ಎಂದು ಸದಸ್ಯರಾದ ಗೋಪಿನಾಥ ರವರು ಸಭೆಯ ಗಮನಕ್ಕೆ ತಂದಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯ ಉಜಾಲ ಫ್ಯಾಕ್ಟರಿ ಯಿಂದ ಸೋಮಸುಂದರಪಾಳ್ಯ ಕೆರೆ (ಹೊಸಪಾಳ್ಯ 2ನೇ ಹಂತ) ಹೊಸದಾಗಿ ಒಳಚರಂಡಿ/ಕುಡಿಯುವ ನೀರಿನ ಪೈಪ್ ಲೈನ್ ಅಳವಡಿಸುವಂತೆ ಸದಸ್ಯರಾದ ಉಮೇಶ ರವರು |

Scanned with Car

| | | |
|---|---|---|
| | | ಕೋರಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕೈಗೆತ್ತಿಕೊಂಡಿರುವ ಕೇಲವು ಕಾಮಗಾರಿಗಳು ಪ್ರಗತ್ತಿಯಲ್ಲಿದ್ದು, ಕಾಮಗಾರಿ ಪೂರ್ಣಗೊಂಡಿರುವ ರಸ್ತೆಗಳಲ್ಲಿ ವೆಟ್‌ಮಿಕ್ಸ್ ಹಾಕಿ ಸಾರ್ವಜನಿಕ ರಸ್ತೆ ಸಂಚಾರಕ್ಕೆ ಅನುವು ಮಾಡಿಕೊಂಡುವಂತೆ ಕೋರಿರುತ್ತಾರೆ.<br>• ಈ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸೂಚಿಸಿರುತ್ತಾರೆ.<br><br>ಕ್ರಮ : ಸ.ಅ. ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 4 | ತೋಟಗಾರಿಕೆ ಇಲಾಖೆ. | • ವಾರ್ಡ್ ವ್ಯಾಪ್ತಿಯ ಹೊಸಪಾಳ್ಯ ಉದ್ಯಾನವನದಲ್ಲಿ ಬೆಳೆದಿರುವ ಹುಲ್ಲನ್ನು ಕತ್ತಿರಿಸಲು ವಾರ್ಡ್ ಸದಸ್ಯರು ಕೋರಿರುತ್ತಾರೆ.<br>ಈ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>• ಕ್ರಮ ತೋಟಗಾರಿಕೆ ನಿರ್ವಹಣೆ ಪರಿವೀಕ್ಷಕರು |
| 5 | ಕಾಮಗಾರಿ | • ವಾರ್ಡ್ ವ್ಯಾಪ್ತಿಯ ಮುನೇಶ್ವರ ಬಡಾವಣೆ, 8ನೇ ಅಡ್ಡ ರಸ್ತೆಯು ಮಣ್ಣು ರಸ್ತೆಯಾಗಿದ್ದು, ರಸ್ತೆ ಡಾಂಬರೀಕರಣಗೊಳಿಸುವಂತೆ ಹಾಗೂ ರಸ್ತೆ ಬದಿಯ ಚರಂಡಿಗಳಲ್ಲಿ ಹೊಳೇತ್ತಲು ಸದಸ್ಯರು ಕೋರಿರುತ್ತಾರೆ.<br>• ಹೊಸಪಾಳ್ಯ ವಿದ್ಯುತ್ ಚಿತಗಾರದಲ್ಲಿ ಕೈ-ಕಾಲು ತೊಳೆಯಲು ವ್ಯವಸ್ಥೆ ಮಾಡುವಂತೆ ಹಾಗೂ ಈ ಚಿತಗಾರದಲ್ಲಿ ಸಾರ್ವಜನಿಕರಿಗೆ ಉಪಯೋಗಕ್ಕೆ ನಾಮಫಲಕಗಳು, ಬೀದಿ ದೀಪಗಳ ನಿರ್ವಹಣೆ, ಬೋರ್‌ವೆಲ್, ಸಂಪ್, ಬೆಂಚ್ ಹಾಗೂ ಇತರೆ ದುರಸ್ಥಿ ಕಾರ್ಯಗಳ ಬಗ್ಗೆ ಕೋರಿರುತ್ತಾರೆ.<br>• ಮುನೇಶ್ವರ ಬಡಾವಣೆಯ ಕೆರೆ ವ್ಯಾಪ್ತಿಯಲ್ಲಿ ಮತ್ತು ಕೆ.ಸಿ.ಡಿ.ಸಿ ಸುತ್ತಮುತ್ತಲ್ಲಿನ ಪ್ರದೇಶಗಳಲ್ಲಿ ಕಾಂಪೌಂಡ್ ಗೋಡೆ ಕಾಮಗಾರಿಗೆ ಬದಲು ಬೇರೆ ಉಪಯುಕ್ತ ಕಾಮಗಾರಿಯನ್ನು ಕೈಗೊಳ್ಳುವಂತೆ ಸದಸ್ಯರು ಕೋರಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯ ಅಯಿಷಾ ಮಸೀದಿ ರಸ್ತೆಗೆ ಡಾಂಬರೀಕರಣಗೊಳಿಸುವಂತೆ ಸದಸ್ಯರು ಕೋರಿರುತ್ತಾರೆ.<br>• ಸೋಮಸುಂದರಪಾಳ್ಯ, ಮಂಗಮ್ಮನಪಾಳ್ಯ ಕೆರೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಫೆನ್ಸಿಂಗ್ ಅಳವಡಿಸಲು ಕೋರಿರುತ್ತಾರೆ.<br>• ಡೈಗ್ನಾಸ್ಟಿಕ್ ಸೆಂಟರ್, ಪ್ರಾಥಮಿ ಆರೋಗ್ಯ ಕೇಂದ್ರ, ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಂತೆ ಸದಸ್ಯರು ಕೋರಿರುತ್ತಾರೆ.<br>ಈ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸಹಾಯಕ ಅಭಿಯಂತರರಿಗೆ ಸೂಚಿಸಿರುತ್ತಾರೆ.<br>ಕ್ರಮ: ಸ.ಅ. ವಾರ್ಡ್ ನಂ. 190. |

Scanned with Car

ಈ ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ, ಸಭೆಯನ್ನು ವಂದಾನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ವಾರ್ಡ್ ನಂ. 190

ಅಧ್ಯಕ್ಷರು/ ನೋಡಲ್ ಅಧಿಕಾರಿಗಳು
ವಾರ್ಡ್ ನಂ. 190

ಪ್ರತಿಯನ್ನು:-

1. ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿ ಆಯುಕ್ತರು(ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
3. ವಾರ್ಡ್ ಸಮಿತಿಯ ಅಧ್ಯಕ್ಷಕರ ಮಾಹಿತಿಗಾಗಿ ಸಲ್ಲಿಸಿದೆ.
4. ವಾರ್ಡ್ ಸಮಿತಿಯ ಸದಸ್ಯರ ಮಾಹಿತಿಗಾಗಿ ಸಲ್ಲಿಸಿದೆ.
5. ಕಛೇರಿ ಪ್ರತಿ.

Scanned with Car